# ಅನ್ವರ್ ಬಾಷಾ ಅವರ ಮನೆಯಲ್ಲಿ ನಿತ್ಯ ಕಲ್ಯಾಣ ಕಾರ್ಯಕ್ರಮ

ಚಿತ್ರದುರ್ಗ ಆ. 17 - ಶರೀರ ತೊಟ್ಟುಕೊಂಡಿರುವವರಿಗೆ ತಮ್ಮದೇ ಆದ ಜೀವ, ಜೀವನ ಇದೆ. ಅಲ್ಲಿ ಏರಿಳಿತಗಳು ಇವೆ. ಅವುಗಳನ್ನು ಸಮತೋಲನ ಸ್ಥಿತಿಗೆ ಹೋಗಿ ತಹಬದಿಗೆ ತಂದುಕೊಳ್ಳಬೇಕು. ಸರ್ವ ರೀತಿಯ ಸಮತೋಲನ ಸಾಧಿಸಿದವರ ಜೀವನ ಹದುಳವಾಗುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಬಡಾಮಕಾನ್ ಸಮೀಪದ ಅನ್ವರ್ ಪಾಷ ಅವರ ಮನೆಯಲ್ಲಿಂದು ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಸಮತೋಲನ : ಅದರ ಸಾಧನೆ ಮತ್ತು ಪ್ರಯೋಜನ ವಿಷಯ ಚಿಂತನ ಮಾಡಿದ ಶ್ರೀಗಳು, ಸಮತೋಲನವನ್ನು ಸಾಧನೆಯ ಮೂಲಕ ಪಡೆಯುತ್ತ ಹೋಗಬೇಕು. ಸಾಧು ಸಂತರು, ಸೂಫಿ ಸಂತರು ಧ್ಯಾನಸ್ಥರಾಗಿರುವಾಗ ಸಿಗುವಂತಹ ಸಂತೋಷ ಅದಾಗುತ್ತದೆ. ಧ್ಯಾನದಲ್ಲಿ ಇತರರು ಅನುಭವಿಸುವ ಸುಖವನ್ನು ಮುಸ್ಲಿಮರು ನಮಾಜ್‌ನಲ್ಲಿ ಕಂಡುಕೊಳ್ಳುತ್ತಾರೆ. ಅಲ್ಲಿ ಮಹದಾನಂದವನ್ನು ಅನುಭವಿಸುತ್ತಾರೆ. ಜೈನರು ಬಸದಿಗಳಲ್ಲಿ, ಬೌದ್ಧರು ವಿಹಾರಗಳಲ್ಲಿ, ಕ್ರಿಶ್ಚಿಯನ್ನರು ಚರ್ಚ್‌ಗಳಲ್ಲಿ ಸಮತೋಲನ ಸ್ಥಿತಿ ಕಂಡುಕೊಳ್ಳುತ್ತಾರೆ. ಶರೀರ ತೊಟ್ಟುಕೊಂಡಿರುವವರಿಗೆ ತಮ್ಮದೇ ಆದ ಜೀವ, ಜೀವನ ಇದೆ. ಅಲ್ಲಿ ಏರಿಳಿತಗಳು ಇವೆ. ಅವುಗಳನ್ನು ಸಮತೋಲನ ಸ್ಥಿತಿಗೆ ಹೋಗಿ ತಹಬದಿಗೆ ತಂದುಕೊಳ್ಳಬೇಕು ಎಂದು ತಿಳಿಸಿದರು.

ಕೆಲವು ಬಾರಿ ಮಾನವ ಅನೇಕ ಅನಾಹುತಗಳಿಗೆ ಕಾರಣನಾಗುತ್ತಾನೆ. ಸಮತೋಲನ ಕಳೆದುಕೊಂಡಾಗ ಇಂತಹ ಘಟನೆಗಳಿಗೆ ಸಾಕ್ಷಿಯಾಗುತ್ತಾನೆ. ಉದ್ವೇಗಕ್ಕೆ ಒಳಗಾಗಿ ವಿಚಾರವನ್ನು ವ್ಯಕ್ತಪಡಿಸಿ ಆತಂಕಗಳಿಗೆ ಸಿಲುಕಿಕೊಳ್ಳುತ್ತಾನೆ. ಭಾವೋದ್ವೇಗಕ್ಕೆ ಒಳಗಾದ ವ್ಯಕ್ತಿ ತನ್ನೊಳಗಿನದನ್ನು ಗೊತ್ತಾಗದೆ ಹೊರಹಾಕುತ್ತಾನೆ. ಆಧುನಿಕ ಜೀವನ ತಲ್ಲಣಗಳಿಂದ ಕೂಡಿದೆ. ಇಲ್ಲಿ ಮಹಾಮಾರಿಗಳು ಇವೆ. ಇಂಥವುಗಳಿಂದ ನಾವು ಹೊರಬರಬೇಕೆಂದರು.

1) ಶಾರೀರಿಕ ಸಮತೋಲನ : ಶರೀರಕ್ಕೆ ಸಾಧನವಾಗಿರುವ ಇಂದ್ರಿಯಗಳನ್ನು ನಿಯಂತ್ರಿಸುವ ಮೆದುಳು, ಬುದ್ಧಿ. ಇದು ಎಲ್ಲದನ್ನು ನೋಡುತ್ತಿರುತ್ತದೆ. ಶರೀರ, ಬುದ್ಧಿ, ಇಂದ್ರಿಯಗಳ ನಡುವೆ ಸಮತೋಲನ ಸಾಧ್ಯವಾಗುತ್ತದೆ. ಇದರಲ್ಲಿ ಯಾವುದೇ ಗೊಂದಲ ಇರುವುದಿಲ್ಲ.

2) ಆಂತರಿಕ ಸಮತೋಲನ : ಆಂತರ್ಯದಲ್ಲಿ ಸಮಾತೋಲನ ಇರುವವರು ಸುಖ ದುಃಖ, ನೋವು ನಲಿವನ್ನು ಸಮಾನವಾಗಿ ಸ್ವೀಕರಿಸುತ್ತಾರೆ. ಇದು ಎಲ್ಲರಿಗೂ ಸಿದ್ಧಿಸುವುದಿಲ್ಲ. ಸಾಧನೆಯಿಂದ ಮಾತ್ರ ಸಿದ್ಧಿಸುತ್ತದೆ. ಬಸವಣ್ಣನವರು ಸಿರಿ ಬರಲಿ ದುಃಖ ಬರಲಿ ಸಮನಾಗಿ ಹಂಚಿಕೊಳ್ಳಬೇಕು ಎಂದು ಹೇಳುತ್ತಾರೆ. ಸುಖವನ್ನು ಹಂಚಿಕೊಳ್ಳಲು ಜನರಿರುತ್ತಾರೆ ಆದರೆ ದುಃಖ ಬಂದರೆ ಜನರಿರುವುದಿಲ್ಲ. ಜೀವನ ಸುಖ ದುಃಖಗಳ ಸಂಗಮ.

3) ಸಾಮಾಜಿಕ ಸಂತುಲನ (ಸಮತೋಲನ) : ಸಮಾಜದಲ್ಲಿ ಎಲ್ಲರನ್ನು ಪ್ರೀತಿಸುವ ಉದಾರ ಹೃದಯವನ್ನು ಬೆಳೆಸಿಕೊಳ್ಳಬೇಕು. ಉಚ್ಚ ನೀಚ ಭಾವನೆಯಿಂದ ಹೊರಬರಬೇಕು. ಮಾನವ ಜನಾಂಗ ಒಂದೇ ಜಾತಿ. ನಿಸರ್ಗ ಮಾನವನನ್ನು ಸೃಷ್ಟಿಸಿತು ಆದರೆ ಮಾನವ ಜಾತಿಗಳನ್ನು ನಿರ್ಮಿಸಿದ. ಮಾನವ ವಿಶಾಲ ಹೃದಯವನ್ನು ಪಡೆದುಕೊಳ್ಳಬೇಕು. ಸಮತೋಲನದ ಸಾಧನೆ ಅಧ್ಯಯನದಿಂದ ಪಡೆದುಕೊಳ್ಳಬೇಕು. ಅಂತರ್ಮುಖಿ ಸಾಧನೆ ಬೇಕು. ಮಾನವ ಅಂತರ್ಮುಖಿಯಾಗಬೇಕು. ಇದರಿಂದ ಆನಂದ ಸಿಗುತ್ತದೆ. ಸರ್ವ ರೀತಿಯ ಸಮತೋಲನ ಸಾಧಿಸಿದವರ ಜೀವನ ಹದುಳವಾಗುತ್ತದೆ. ಇವರು ಕೋಪ ತಾಪದಿಂದ ಹೊರಬರುತ್ತಾರೆ. ಇದರಿಂದ ಏಕಾಗ್ರತೆ ಬರುತ್ತದೆ ಎಂದರು.

ಸಮ್ಮುಖ ವಹಿಸಿದ್ದ ರಾಣೇಬೆನ್ನೂರು ವಿರಕ್ತಮಠದ ಶ್ರೀ ಗುರುಬಸವಸ್ವಾಮಿಗಳು ಮಾತನಾಡಿ, ಪ್ರತಿಯೊಬ್ಬರ ಮನೆಗಳಲ್ಲಿ ದೀಪ ಹೊತ್ತಿವೆ. ಎಲ್ಲರ ಮನೆಯಲ್ಲಿನ ಜ್ಯೋತಿಗಳು ಒಂದೇ ರೀತಿ ಇರುತ್ತವೆ. ನಮಗೆಲ್ಲರಿಗೂ ಸೂರ್ಯ, ಗಾಳಿ, ನೀರು ಒಂದೆ. ಮಾನವ ಕುಲ ಒಂದೇ ಎಂಬ ಭಾವನೆ ನಮ್ಮದಾಗಿರಬೇಕು. ಸಮಾಜದಲ್ಲಿ ಸಮಾನತೆ ತರುವಂತಹ ಕೆಲಸವನ್ನು ಮುರುಘಾ ಶರಣರು ಮಾಡುತ್ತಿದ್ದಾರೆ. ಮನುಷ್ಯ ದುಶ್ಚಟಗಳಿಗೆ ಒಳಗಾಗಿ ಸಾಯುವುದಕ್ಕಿಂತ ಸತ್‌ಚಿಂತನೆಗಳನ್ನು ಕೇಳುವುದರೊಂದಿಗೆ ದುಶ್ಚಟಗಳಿಂದ ದೂರವಿರಬೇಕೆಂದರು.

ಮುಖ್ಯಅತಿಥಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಆರ್. ರಂಗನಾಥ್ ಮಾತನಾಡಿ, ನಾವು ಪ್ರತಿನಿತ್ಯವು ಕಲ್ಯಾಣ ಕಾರ್ಯಗಳನ್ನು ಮಾಡುತ್ತ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಒಳ್ಳೆಯ ಗುಣಗಳು ಮುಂದಿನ ಪೀಳಿಗೆಗೆ ದೊರಕಲು ಸಾಧ್ಯ. ನಮ್ಮ ಜೀವನದಲ್ಲಿ ಸಮತೋಲನ ಸ್ಥಿತಿಯನ್ನು ಕಾಪಾಡಿಕೊಳ್ಳಬೇಕು. ನಾವು ಒಳ್ಳೆಯದನ್ನು ಕೊಡುತ್ತ ಒಳ್ಳೆಯದನ್ನು ಬಿಟ್ಟು ಹೋಗಬೇಕು ಎಂದರು.

ಕಾರ್ಯಕ್ರಮದ ದಾಸೋಹಿಗಳಾದ ಅನ್ವರ್ ಪಾಷ ವೇದಿಕೆಯಲ್ಲಿದ್ದರು. ಶ್ರೀ ಬಸವನಾಗಿದೇವ ಸ್ವಾಮಿಗಳು, ಸೈಯದ್ ಇಸಾಕ್, ಡಿ.ಡಿ. ಬಾಬು, ನಗರಸಭೆ ಸದಸ್ಯ ನಸ್ರುಲ್ಲಾ, ಅಬ್ದುಲ್ ರೆಹಮಾನ್, ಕಾಂಗ್ರೆಸ್ ಮುಖಂಡ ತಾಜ್‌ಪೀರ್ ಮೊದಲಾದವರಿದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ವಿಶ್ವನಾಥ್ ಸ್ವಾಗತಿಸಿದರು. ಅನ್ವರ್ ಪಾಷ ವಂದಿಸಿದರು. ಉಷಾಕಿರಣ್ ಮತ್ತು ನಿರಂಜನ ದೇವರಮನೆ ನಿರೂಪಿಸಿದರು.




